ಶ್ರೀ ಆರ್. ನಾರಾಯಣ್:- ಮಾನ್ಯ ಅಧ್ಯಕ್ಷರೆ, ಮೊನ್ನೆ ನನ್ನ ಪ್ರಶ್ನೆ ಲ್ಯಾಪ್ಸಾಗಿದೆ. ಅವರು ಉತ್ತರದಲ್ಲಿ ಕಾಲಾವಕಾಶವನ್ನು ವಿಸ್ತರಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಈಗ ಸರಿ ಸುಮಾರು ಶೇ. 20ರಿಂದ 30ರವರೆಗೆ ಜೆನಿಯನ್ ಬೋನಾಫಾಯ್ಡ್, ಅನ್-ಅಥವ ರೈಜ್ಡ್ ಇರುವವರು ಸಕಾಲದಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಅಧ್ಯಕ್ಷರು:- ಮಾನ್ಯ ನಾರಾಯಣ್‌ರವರೆ, ಪ್ರತಿಯೊಬ್ಬರು ಪ್ರೊಸೀಡಿಂಗ್ಸ್ ಅನ್ನು ಬಹಳ ಲಕ್ಷ್ಯಕೊಟ್ಟು ಕೇಳಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ ಸಾರಸಗಟಾಗಿ ವಿಸ್ತರಣೆ ಮಾಡುತ್ತೇವೆಂದು ಡಿಕ್ಲೇರ್ ಮಾಡಿದರೆ ನಿಜವಾದ ಬೆನಿಫಿಶೀಯರ್ಸ್‌ಗೆ ತೊಂದರೆಯಾಗುತ್ತದೆ. ಬೋಗಸ್ ಅಪ್ಲಿಕೇಷನ್‌ಗಳು ಇರುವವರು ಬಂದು ರಿಜಿಸ್ಟ್ರೇಷನ್ ಮಾಡಿರುತ್ತಾರೆಂದು ಅವರು ಹೇಳುತ್ತಾರೆ. ತಾವು ಅತುರ ಮಾಡಬೇಡಿ, ಅವರು ಏನು ಹೇಳುತ್ತಾರೆಂಬುದನ್ನು ಕೇಳಿ.

ಶ್ರೀ ಆರ್. ನಾರಾಯಣ್:- ನನಗೆ ಅರ್ಥವಾಯಿತು, ಅವರು ಪರಿಹಾರವನ್ನು ಕಂಡುಹಿಡಿದ್ದಾರೆ. ನಾನು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಬಗರ್‌ಹುಕುಂ ಎಂದು ಹೇಳಿದರೆ ಗೋಮಾಳ, ಖರಾಬ್ ಲ್ಯಾಂಡ್‌ಗಳನ್ನು ಅಸಲಥಾರೈಜ್ಡ್ ಇರುವುದನ್ನು ರೆಗ್ಯೂಲರೈಜ್ ಮಾಡುತ್ತಿದ್ದೀರಿ. ಈಗ ಸಾಕಷ್ಟು ಲ್ಯಾಂಡ್ ಫಾರೆಸ್ಟದು ಅಮೃತ್ ಮಹಲ್, ಎಕ್ಸೈಜ್ ಲ್ಯಾಂಡ್ ಬಗ್ಗೆ ಸರ್ಕಾರ ಏನಾದರೂ ಉತ್ತರವನ್ನು ಹೇಳಬೇಕಲ್ಲಾ,

ಅಧ್ಯಕ್ಷರು:- ಅಲ್ಲಿ ಒಂದು ಇಂಚು ಜಾಗವನ್ನೂ ಕೂಡ ಕೊಡುವುದಕ್ಕಾಗುವುದಿಲ್ಲ. ಈಗ ಇರುವ ಅರಣ್ಯ ಹೋಗಿದೆ. ಇನ್ನು ಇರುವ ಅರಣ್ಯವನ್ನು ಕೊಟ್ಟು ಏನು ಮಾಡುತ್ತೀರಿ?

ಶ್ರೀ ಆರ್.ನಾರಾಯಣ್:- ಬೇರೆ ಗೋಮಾಳ, ಕರಾಬ್‌ಲ್ಯಾಂಡ್ ಇವೆಲ್ಲವನ್ನು ರೆಗ್ಯೂಲರೈಜ್ ಮಾಡುತ್ತಿದ್ದಾರೆ. what about unauthorised cultivation in forest, amruthmahal, etc.? ಇದರ ಬಗ್ಗೆ ಸರ್ಕಾರದ ನಿಲುವು ಏನು?

ಅಧ್ಯಕ್ಷರು:- ಇದನ್ನು ಬಿಡಿ. we will take it up separately.

(ಓ) ದರಖಾಸ್ತು ಕಮಿಟಿ ಕುರಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಈಗ ದರಖಾಸ್ತು ಸಮಿತಿಗೆ ಜಮೀನುಗಳನ್ನು ಮಂಜೂರು ಮಾಡತಕ್ಕಂಥಾದ್ದು ಇದನ್ನು ಕಟ್ ಆಫ್ ಡೇಟಿನಲ್ಲಿ ಮುಕ್ತಾಯ ಮಾಡುವಂತಹ ಒಂದು ಡೇಟ್ ಫಿಕ್ಸ್ ಮಾಡಿ ನಂತರ ಫಾರಂ 50ರ ಬಗ್ಗೆ ಯೋಚನೆ ಮಾಡಬಹುದು. ಅದು 3-4ವರ್ಷ ಆದರೂ ಪ್ರೊಲಾಂಗ್ ಆಗುತ್ತಾ ಹೋದರೆ ಪ್ರಯೋಜನವಾಗುವುದಿಲ್ಲ. ಎಲ್ಲರೂ ನಿವೃತ್ತಿಯಾಗಿರುವಂತಹ ತಹಶೀಲ್ದಾರರು ಆಗಿದ್ದಾರೆ. ಫಿಲ್ಡ್ ವರ್ಕರ್ಸ್ ಯಾರೂ ಇಲ್ಲ.

ಅಧ್ಯಕ್ಷರು:- ನಾನು ನನ್ನ ಕ್ಷೇತ್ರದಲ್ಲಿ ಅನುಭವಿಸುತ್ತಿರುವಂತಹ ತೊಂದರೆಯನ್ನು ಹೇಳುತ್ತೇನೆ. ನಾನು ಜಿಲ್ಲಾಧಿಕಾರಿಯನ್ನು ಕರೆಸಿ ಕೂರಿಸಿಕೊಂಡು ಹೇಳಿದೆ. ನಿಮ್ಮ ಅಧಿಕಾರಿಗಳು

ಯಾರು ಇದ್ದಾರೆ, ಅವರು ಹೋಗಿ ನ್ಯಾಯವಾಗಿ ವಿಚಾರಣೆಯನ್ನು ಮಾಡಿ ಒಂದು ರಿಪೋರ್ಟ್ ಕೊಡಲಿ, ಅವರು ರಿಪೋರ್ಟ್ ಸಬ್‌ಮಿಟ್ ಮಾಡಿದ ಮೇಲೆ ನಮ್ಮ ಕಮಿಟಿಯವರು ಯಾರು ಇರುತ್ತಾರೆ ಅವರು ಸ್ಥಳಕ್ಕೆ ಹೋಗುತ್ತಾರೆ. ಈ ಮಧ್ಯೆ ತಹಶೀಲ್ದಾರರು ಹೋಗಿ ಕನ್‌ಫರ್ಮ್ ಮಾಡಿಕೊಂಡು ಬರಲಿ. ನಮ್ಮ ಸಮಿತಿಯವರು ಅಲ್ಲಿಗೆ ಹೋದಾಗ ಹಣ ಕಟ್ಟಿಸಿಕೊಳ್ಳುವಂತಹ ರಸೀತಿ ಪುಸ್ತಕವನ್ನು ತೆಗೆದುಕೊಂಡು ಹೋಗಲಿ. ಅಲ್ಲಿ ಹಣವನ್ನು ಕಟ್ಟಿಸಿಕೊಳ್ಳಲಿ, ಮಾರನೆ ದಿವಸ ಬಂದು ಟ್ರಜರಿಗೆ ತುಂಬಿಸಿಕೊಳ್ಳಲಿ, ಸಾಗುವಳಿ ಚೀಟಿಯನ್ನು ಸ್ಥಳದಲ್ಲೇ ಕೊಡಬೇಕು. ಎಂದು ಹೀಗೇ ಮಾಡುವುದರಿಂದ ಇದರ ಮಧ್ಯೆ ಬರುವಂತಹ ದಳ್ಳಾಳಿಗಳನ್ನು ತಪ್ಪಿಸಬಹುದು. ನ್ಯಾಯವಾದ ವಿಚಾರವು ಗೊತ್ತಾಗುತ್ತದೆ. ಇದರಲ್ಲಿ ಪಕ್ಷ, ಪಂಗಡ ನೋಡುವುದು ಬೇಡವೆಂದು ಹೇಳಿದೆ. ಆದರೆ ಇಲ್ಲಿ ಕೆಳಹಂತದಲ್ಲಿರುವಂತಹ ಅಧಿಕಾರಿಗಳು ಇದಕ್ಕೆ ಸಹಕರಿಸುವುದಿಲ್ಲ. ಅವರು ವರದಿಯನ್ನೇ ತರುವುದಿಲ್ಲ. ಅವರು ನಂತರ ಏನು ಮಾಡುತ್ತಾರೆಂದರೆ ನೂರು ಅಪ್ಲಿಕೇಷನ್ ಒಂದು ಊರಿನದ್ದು ಇರುತ್ತದೆ. ಇವತ್ತು ನಾವು ಆಡಳಿತದಲ್ಲಿದ್ದೆವೆಂದು ನಮ್ಮ ಮಾತಿಗೆ ಬೆಲೆ ಕೊಟ್ಟು ನಮಗೆ ನಮಗೆ ಬೇಕಾದವರ ಅರ್ಜಿಗಳನ್ನು ತರುವುದು. ಈ ರೀತಿಯಲ್ಲಿ ಜಮೀನಿನ ಬಗ್ಗೆ ಆಗಬಾರದು. ಆದುದರಿಂದ ದಯಮಾಡಿ ನಿಮ್ಮ ಅಧಿಕಾರಿಗೆ ತಾಕಿತ್ತು ಮಾಡಿ ಎಲ್ಲಾ ತಾಲ್ಲೂಕುಗಳ ಕಮಿಟಿಗಳ ಮಾಹಿತಿಗಳನ್ನು ತರಿಸಿ ನೋಡಿ, ಇದು ಬಹಳ ನಿಧಾನಗತಿಯಲ್ಲಿ ಹೋಗುತ್ತಾ ಈದೆ. ಈ ಕೆಲಸ ಬೇಗ ಬೇಗ ಮಾಡುತ್ತಿಲ್ಲ. ಇದರಲ್ಲಿ ಮಾತ್ರ ಅನ್ಯಾಯವಾಗುವುದಕ್ಕೆ ಬಿಡಬಾರದು. ಇದು ಈ ರೀತಿಯೇ ಇದ್ದರೆ ನೀವು ಯಾರಿಗೂ ಜಮೀನನ್ನು ಕೊಡುವುದ ಕ್ಕಾಗುವುದಿಲ್ಲ. ಜಮೀನನ್ನು ಸೃಷ್ಟಿ ಮಾಡುವಂತಹ ವಿಚಾರವಲ್ಲ; ಮತ್ತು ಖರೀದಿ ಮಾಡಿ ತರುವಂಥ ವಿಚಾರವು ಅಲ್ಲ. ಇದು ಬಡವರಿಗೆ ಕೊಡುವಂತಹ ಕೊನೆಯ ಅವಕಾಶವಾಗಿ ರುವಂಥಾದ್ದು. ಆದುದರಿಂದ ತಾವುಗಳು ಹೆಚ್ಚು ಪ್ರವಾಸಗಳನ್ನು ಮಾಡುವುದು, ಮತ್ತು ಎಲ್ಲಾ ಕಡೆಗಳಲ್ಲಿ ಅನಿರೀಕ್ಷಿತ ಭೇಟಿ ಮಾಡುವಂಥಾದ್ದು ಆಗಬೇಕು. ಇದು ಏಥಕೆ ನಿಧಾನವಾಗಿದೆ; ಎಂಬುದನ್ನು ನೋಡಬೇಕು. ಈಗ ಆರು ಸಾವಿರ, ಏಳು ಸಾವಿರ ಅರ್ಜಿಗಳು ಪೆಂಡಿಂಗ್ ಇರುವ ಕಡೆ ಇರುವ ಮೂರು ತಿಂಗಳುಗಳಾದರೂ 100 ಅರ್ಜಿಗಳನ್ನೂ ಕೂಡ ಕ್ಲಿಯರ್ ಮಾಡುವುದಿಲ್ಲ. ಇದನ್ನು ಇವರು ಈ ಕಾಲದಲ್ಲಿ ಮಾಡದೆ ಇನ್ನು 20 ವರ್ಷಗಳಿಗೆ ಮಾಡುತ್ತಾರ?.

ಶ್ರೀ ರಮೇಶ್ ಸಿ ಜಿಗಜಿಣಗಿ:- ಇದಕ್ಕೆ ಶಾಸಕರೇ ಅಧ್ಯಕ್ಷರಾಗಿದ್ದಾರೆ.

ಅಧ್ಯಕ್ಷರು:- ನಿಜ, ಶಾಸಕರೇ ಅಧ್ಯಕ್ಷರಾಗಿದ್ದಾರೆ. ಶಾಸಕರಿಗೆ ಸ್ಥಳೀಯ ಅಧಿಕಾರಿಗಳು ಸಹಕಾರ ಕೊಟ್ಟರೆ ತಾನೇ ಕೆಲಸವಾಗುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಮ್ಮ ತಾಲ್ಲೂಕಿನಲ್ಲಿ ಒಬ್ಬ ಸರ್ವೇಯರ್ ಇದ್ದಾರೆ. ಸರ್ವೇಯರ್‌ಗಳು ಇಲ್ಲವೆಂದರೆ ವರದಿಯನ್ನು ಹೇಗೆ ತರುವುದಕ್ಕೆ ಸಾಧ್ಯವಾಗುತ್ತದೆ?

ಅಧ್ಯಕ್ಷರು:- ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಒಟ್ಟಿಗೆ ಈ ಕೆಲಸವನ್ನು ತೆಗೆದುಕೊಂಡರು. ಅವರು ಸರ್ವೆ ಮಾಡಿದ ಮೇಲೆ ಸಮಿತಿಯವರು ಹೋಗಿ ತೀರ್ಮಾನವನ್ನು ಮಾಡಿ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಹಣವನ್ನು ತುಂಬಿಕೊಳ್ಳುವುದಕ್ಕೆ ಸುಮಾರು ಒಂದೂವರೆ ತಿಂಗಳು ಮಾಡಿದರು. ನಾನು

ಜಿಲ್ಲಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೆ ಅವರು ಹೋಗಿ ವಿಚಾರಣೆಯನ್ನು ಮಾಡಿ ಹಣವನ್ನು ತುಂಬಿಸಿಕೊಂಡರು. ನನ್ನ ಕ್ಷೇತ್ರದಲ್ಲಿ ಈ ರೀತಿಯಾದರೆ ಬೇರೆ ಕಡೆಗಳಲ್ಲಿ ಹೇಗೆ ಇದೆ. ಬಡವರಿಗೆ ಸಹಾಯ ಮಾಡುವುದಕ್ಕೆ, ಬಾಯಿಇಲ್ಲದವರಿಗೆ ಸಹಾಯ ಮಾಡುವುದಕ್ಕೆ ಯಾರಿಗೂ ಮನಸ್ಸು ಬರುವುದಿಲ್ಲ. ಆದುದರಿಂದ ನೀವು ದಿಟ್ಟತನದಿಂದ ಕೆಲಸವನ್ನು ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಅಪಕೀರ್ತಿಗೆ ಪಾಲಾಗುತ್ತೀರಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಸರ್ವೇಯರ್‌ಗಳನ್ನು ಒಂದು ವರ್ಷದಿಂದ ಪೋಸ್ಟ್ ಮಾಡಿಲ್ಲ. ಅವರನ್ನು ಕೊಡದೆ ಕೆಲಸವನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಮೊದಲು ಹಣವನ್ನು ಕಟ್ಟುವ ಅಗತ್ಯವಿಲ್ಲ.

ಅಧ್ಯಕ್ಷರು:- ಹಣವನ್ನು ಮೊದಲು ಕಟ್ಟುವುದು ಅಲ್ಲ, ಅಲ್ಲ ಸಾಗುವಳಿ ಚೀಟಿ ಕೊಡಲಿಕ್ಕೆ ಎಂದು.

ಶ್ರೀ ಕಾಗೋಡು ತಿಮ್ಮಪ್ಪ:- ಸಾಗುವಳಿ ಚೀಟಿಯನ್ನು ಕೊಡಬೇಕಾದರೆ ಹಣವನ್ನು ಕಟ್ಟಬೇಕಾದಂತಹ ಅಗತ್ಯವಿಲ್ಲ.

ಅಧ್ಯಕ್ಷರು:- ಕಿಮ್ಮತ್ತು ತುಂಬಬೇಕಲ್ಲಾ..

ಶ್ರೀ ಕಾಗೋಡು ತಿಮ್ಮಪ್ಪ:- ಮೊದಲು ಆ ರೀತಿ ಇತ್ತು, ಈಗ ಅಮೆಂಟ್‌ಮೆಂಟ್ ಆದನಂತರ ಸಾಗುವಳಿ ಚೀಟಿಯನ್ನು ಕೊಡಬೇಕಾದರೆ ಹಣವನ್ನು ಕಟ್ಟುವ ಅಗತ್ಯವಿಲ್ಲ. ಸಾಗುವಳಿ ಚೀಟಿಯಲ್ಲಿ ಇಷ್ಟು ಕಂತು ಕಟ್ಟಬೇಕೆಂದು ನಮೂದು ಮಾಡಿರುತ್ತಾರೆ. ಆ ಕಂತಿನ ಪ್ರಕಾರ ಕಟ್ಟುತ್ತಾ ಹೋಗಬೇಕು. ಈಗ ಪ್ರಶ್ನೆ ಏನಾಗಿದೆ ಎಂದರೆ ಒಂದೇ ಸಾರಿ ಕಟ್ಟುವುದಕ್ಕೆ ಬರುವುದಿಲ್ಲ. ಇಲ್ಲಿ ಎರಡು ಮೀಟಿಂಗ್‌ಗಳು ಮಾಡಬೇಕು. ಮೊದಲನೆಯ ಮೀಟಿಂಗ್ ಮಾಡಬೇಕು. ಎರಡನೆಯ ಮೀಟಿಂಗ್‌ನಲ್ಲಿ ಅದು ಕನ್‌ಫರ್ಮ್ ಮಾಡಬೇಕು. ಇದಕ್ಕೆ 15ದಿವಸಗಳು ಗ್ಯಾಪ್ ಇರಬೇಕಾಗುತ್ತದೆ. ಎರಡು ಮೀಟಿಂಗ್‌ಗಳು ಆದಮೇಲೆ ಸಾಗುವಳಿ ಚೀಟಿಯನ್ನು ಅಲ್ಲೇ ಕೊಡಬಹುದು. ಇಲ್ಲಿ ಹಣವನ್ನು ಕಟ್ಟುವಂತಹ ಅಗತ್ಯವೇ ಇಲ್ಲ. ಈಗ ಅದು ಅಷ್ಟು ಸುಲಭವಾಗಿ ಇದೆ. ಈಗ ತೊಂದರೆ ಇರುವಂಥಾದ್ದು ಏನೆಂದರೆ ನಾವು ಮೊದಲನೆಯ ಮೀಟಿಂಗ್ ಮಾಡುವಂತಹ ಸಂದರ್ಭದಲ್ಲಿ ಸರ್ವೇಯರ್‌ಗಳು ಹೋಗಿ ಇಲ್ಲಿ ಅಳತೆಯನ್ನು ಮಾಡಿಕೊಂಡು ಬರಬೇಕು. ಈಗ ಸರ್ವೇಯರ್‌ಗಳು ಇಲ್ಲದೆ ಇರುವ ಕಾರಣಕ್ಕಾಗಿ ಈ ಕೆಲಸಗಳು ನಿಧಾನವಾಗುತ್ತಿದೆ. ಇವರು ಒಂದು ತಿಂಗಳು ಪೂರ್ತಿ ಮಾಡಿದರೂ ಕೂಡ ನೂರು ರೆಕಾರ್ಡ್‌ಗಳನ್ನು ತಯಾರು ಮಾಡುತ್ತಾ ಇಲ್ಲ. ಇದರಿಂದಲ್ಲೇ ವಿಳಂಬವಾಗುತ್ತಿದೆ. ಆದುದರಿಂದ ದಯಮಾಡಿ ಸರ್ವೇಯರ್‌ಗಳನ್ನು ನೇಮಕ ಮಾಡುವಂಥಾದ್ದು ಪ್ರತಿ ತಾಲ್ಲೂಕುಗಳಿಗೂ ಹೋಗಿ ಅವರು ಈ ಕೆಲಸವನ್ನು ಬೇಗ ಆಗುವಂತೆ ಮಾಡಿ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಇದು ಇಷ್ಟೇ ದಿವಸಗಳಲ್ಲಿ ಮುಗಿಸಬೇಕೆಂದು ಮಾಡಿ.

ಅಧ್ಯಕ್ಷರು:- ಈ ಅಧಿವೇಶನ ಮುಗಿದ ಮೇಲೆ ರಾಜ್ಯದ 175 ತಾಲ್ಲೂಕುಗಳಲ್ಲಿ ಎಷ್ಟು ಅರ್ಜಿಗಳು ಪೆಂಡಿಂಗ್ ಇದೆ, ಎಷ್ಟು ಅರ್ಜಿಗಳು ವಿಲೇವಾರಿಯಾಗಿದೆ, ಒಂದು ತಿಂಗಳಲ್ಲಿ

ಎಷ್ಟು ಇತ್ಯರ್ಥ ಮಾಡಿದ್ದೀರಿ, ಎಂಬ ಮಾಹಿತಿಯನ್ನು ಎಲ್ಲರಿಗೂ ಕಳುಹಿಸಿ ಕೊಡಿ. ಆಗ ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮಾನ್ಯ ಸದಸ್ಯರು ಸರ್ವೇಯರ್‌ಗಳನ್ನು ನೇಮಕ ಮಾಡಬೇಕೆಂದು ಹೇಳುತ್ತಾರೆ. ಸರ್ವೇಯರ್‌ಗಳ ಹುದ್ದೆ 1,400 ಪೋಸ್ಟ್‌ಗಳು ಇತ್ತು. ಎರಡು ತಿಂಗಳುಗಳ ಹಿಂದೆ 1,500 ಹುದ್ದೆಗಳನ್ನು ತುಂಬಿದ್ದೇವೆ. ಎಲ್ಲಾ ತಾಲ್ಲೂಕುಗಳಿಗೂ ಪೋಸ್ಟಿಂಗ್ ಮಾಡಿ ಒಂದೂವರೆ ತಿಂಗಳಾಗಿದೆ. ಆದುದರಿಂದ ಮುಂದೆ ಈ ಸಮಸ್ಯೆ ಬರುವುದಿಲ್ಲ.

MR.SPEAKER:- Please don't prolong.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಮಾನ್ಯ ಕಾಗೋಡು ತಿಮ್ಮಪ್ಪನವರು ದುಡ್ಡು ಕಟ್ಟುವ ಹಾಗೆ ಇಲ್ಲವೆಂದು ಹೇಳಿದರು. ಅದು ನಿಜ, ಈಗ ತೊಂದರೆ ಎಲ್ಲಿ ಬರುತ್ತದೆ ಎಂದರೆ ದರ್ಖಾಸ್ತ್ ಪತ್ರವನ್ನು ಎಂಟ್ರಿ ಮಾಡಿ ಕೊಡುತ್ತಾರಲ್ಲಾ, ಆಗ ತೊಂದರೆ ಬರುತ್ತದೆ. ಇದು ಸುಮಾರು ತಡವಾಗುತ್ತದೆ. ನಾನು ಈ ವಿಷಯವಾಗಿ ಇವತ್ತೇ ಸೂಚನೆಯನ್ನು ನೀಡುತ್ತೇನೆ. ಈ ವಿಷಯವನ್ನು ಯಾವತ್ತು ಕಮಿಟಿಯವರು ಡಿಸೈಡ್ ಮಾಡುತ್ತಾರೆ, ಅವತ್ತೇ ಅವರಿಗೆ ದರ್ಖಾಸ್ತ್ ಪತ್ರವನ್ನು ಕೊಡಬೇಕೆನ್ನುವುದನ್ನು ನಾನು ಹೇಳುತ್ತೇನೆ. ಇನ್ನು ಸರ್ವೆ ಮಾಡುವಂತಹ ವಿಚಾರದಲ್ಲಿ ಪ್ರಾಬ್ಲಂ ಬರುತ್ತದೆ. ನಾನು ಸರ್ವೆಯನ್ನು ಯಾವ ರೀತಿ ಮಾಡಲು ಸಾಧ್ಯವಾಗುತ್ತದೆ ಆ ರೀತಿಯಲ್ಲಿ ಬೇಗ ಆಗುವಂತೆ ಮಾಡಿಸಿಕೊಡುತ್ತೇನೆ. ಮತ್ತೊಂದು ವಿಚಾರವನ್ನು ಮಾನ್ಯ ಹಿರಿಯ ಸದಸ್ಯರು ಆದಂತಹ ಶಿವಪ್ಪನವರು ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವಂತಹ ತೊಂದರೆಯ ಬಗ್ಗೆ ಹೇಳಿದರು. ಪ್ಲಾಂಟೇಷನ್‌ಗಳಿಗಾಗಿ ಫಾರಂ ನಂ. 50 ಆಗಿದ್ದರೆ ಗ್ರಾಂಟ್ ಮಾಡುವುದಿಲ್ಲವೆನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಅದು ನಿಜವಾಗಿದೆ, ಬಿಜಾಪುರ ಜಿಲ್ಲೆಯಲ್ಲಿ ಕಬ್ಬು ಬೆಳೆಯುವಂತಹ ಸರ್ಕಾರಿ ಜಾಗದಲ್ಲಿ ಯಾವನೋ ಒಬ್ಬ ರೈತನ್ನು ಕಬ್ಬು ಬೆಳೆದರೆ ಅವನ ಫಾರಂ 50ರಲ್ಲಿ ಗ್ರಾಂಟ್ ಮಾಡುವುದು. ಅದೇ ಚಿಕ್ಕಮಗಳೂರಿನಲ್ಲಿ ಸರ್ಕಾರಿ ಜಮೀನಿನಲ್ಲಿ ಅರ್ಧ ಎಕರೆ, ಇಪ್ಪತ್ತು ಕುಂಟೆ ಕಾಫಿ ಬೆಳೆಯನ್ನು ಬೆಳೆದರೆ ಅವನಿಗೆ ಮಂಜೂರಾತಿಯನ್ನು ಕೊಡುವುದಕ್ಕಿಲ್ಲವೆನ್ನುವುದು ಸರಿಯಲ್ಲವೆಂದು ನನಗನಿಸುತ್ತದೆ. ಆದುದರಿಂದ ಈಗ ಸದ್ಯಕ್ಕೆ ಆದಷ್ಟು ಮಟ್ಟಿಗೆ ಚಿಕ್ಕಮಗಳೂರಿನ ಸಣ್ಣ ಸಣ್ಣ ಜಮೀನುಗಳಲ್ಲಿ.

ಅಧ್ಯಕ್ಷರು:- ಸರ್ಕಾರಿ ಪ್ಲಾಂಟೇಷನ್ ಇರುವವರ ಪಕ್ಕದಲ್ಲಿ ಬೇರೆಯವರ ಪ್ಲಾಂಟೇಷನ್ ಬರದ ಹಾಗೆ ನೋಡಿಕೊಳ್ಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಕಾನೂನಿನಲ್ಲಿ ಸ್ವಲ್ಪ ತೊಡಕು ಇದೆ. ಏನಾದರೂ ಮಾಡಿ ಅಡಮಿನಿಸ್ಟ್ರೇಟರ್ ಅರ್ಡರ್ ಮಾಡುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಅಧ್ಯಕ್ಷರೆ, ನಿನ್ನೆ ಇಲ್ಲಿ ಆನೆ, ಮತ್ತು ಹಂದಿಗಳ ಓಡಾಟದ ಬಗ್ಗೆ ಪ್ರಸ್ತಾಪವಾದ ಮೇಲೆ ಇವತ್ತು ನೊಣಗಳ ಓಡಾಟವೆಂದು ಪ್ರಸ್ತಾಪಕ್ಕೆ ಬಂತು. ತಮ್ಮ ಅನುಮತಿ ಇಲ್ಲದೆ ಇಲ್ಲ ನಾವು ಎರಡು ನೊಣಗಳನ್ನು ಕೊಂಡಿದ್ದೇವೆ. ಈಗ ಪಕ್ಕದಲ್ಲಿ ಇವರು

ಗಾಬರಿ ಹತ್ತಿಸುತ್ತಿದ್ದಾರೆ. ನೀವು ಸದನದ ಒಳಗಡೆ ಪ್ರಾಣಿ ಹತ್ಯೆಯನ್ನು ಮಾಡಿದ್ದೀರಿ. ನಿಮ್ಮ ಮೇಲೆ ಗೊಂದಲವನ್ನು ಮಾಡುತ್ತೇವೆಂದು ನನ್ನ ಪಕ್ಕದಲ್ಲಿ ಗೊಂದಲ ಮಾಡುತ್ತಿದ್ದಾರೆ. ಶ್ರೀ ವಾಟಾಳ್‌ನಾಗರಾಜ್‌ರವರು..

ಅಧ್ಯಕ್ಷರು:- ನೀವು ಈಗ ಕನ್ನಡವನ್ನು ಹೇಗೆ ಬಳಕೆ ಮಾಡಿದ್ದೀರಿ, ಎಂದರೆ ನೀವು ಪಕ್ಕದಲ್ಲಿ ಎಂದು ಕೈ ತೋರಿಸಿಕೊಂಡು ವಾಟಾಳ್ ನಾಗರಾಜ್‌ರವರನ್ನೂ ತೋರಿಸುತ್ತಾ ಅವರು ನೊಣವೆಂದು ಹೇಳುತ್ತಿದ್ದೇರೆಂದು ನಾನು ತಿಳಿದುಕೊಂಡೆ,

ಶ್ರೀ ವಾಟಾಳ್ ನಾಗರಾಜ್:- ಇನ್ನು ಒಂದು ನೊಣ ಅವರ ತಲೆಯ ಮೇಲೆ ಓಡಾಡುತ್ತಿದೆ.

ಶ್ರೀ ಬಿ.ಬಿ.ಶಿವಪ್ಪ:- ಇಲ್ಲಿ ನನಗೆ ಈ ಮೂರು ಜನರು ಗಾಭರಿ ಹತ್ತಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನೊಣವನ್ನು ಹೊಡೆದವನು ನಾನಲ್ಲ, ಮಾನ್ಯ ಶಿವಪ್ಪನವರು ಒಂದು, ಮತ್ತೊಂದು ಮಾನ್ಯ ನಂಜೇಗೌಡರು, ಇವರು ಸುಮ್ಮನೆ ನನ್ನ ಮೇಲೆ ಆಪಾದನೆಯನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು:- ಈಗ ಮಾನ್ಯ ವೈ. ರಾಮಕೃಷ್ಣರವರು ಅಧ್ಯಕ್ಷತೆಯಲ್ಲಿ ಅದಕ್ಕೆ ಒಂದು ಸದನ ಸಮಿತಿಯನ್ನು ನೇಮಕ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಏನಾಗುತ್ತದೆ ಎಂದರೆ ನಾವು ನೊಣವನ್ನು ಹೊಡೆದುಕೊಂಡು ಕುಳಿತುಕೊಂಡಿದ್ದೇವೆಂದರೆ ತಪ್ಪಾಗುತ್ತದೆ. ಇದಕ್ಕೆ ಹಿಂದಿಯಲ್ಲಿ ಒಂದು ಗಾದೆ ಮಾತು ಇದೆ. "ಕ್ಯಾ ಕರೆತೊ ಮಕ್ಕಿ ಮಾರತೆ ತುಮ್" ಎಂದು ಇದೆ, ಅದು ಹೇಳುವುದು ಬೇಡ. ಏಕೆಂದರೆ ಏನು ಮಾಡುತ್ತಿದ್ದ, ಎಂದರೆ ನೊಣವನ್ನು ಹೊಡೆದುಕೊಂಡು ಕುಳಿತಿದ್ದ ಎಂದು ಆಗುತ್ತದೆ. ಆದುದರಿಂದ ಆದರ ಬಗ್ಗೆ ಗಮನ ಬೇಡ. ಈ ಕಡೆ ಗಮನವರಿಸಿ.

ಶ್ರೀ ರಮೇಶ್ ಸಿ. ಜಿಗಜಿಣಗಿ:- ಈ ನೊಣ ವಾಟಾಳ್ ನಾಗರಾಜ್‌ರವರ ಸುತ್ತಮುತ್ತ ಓಡಾಡುತ್ತಿದ್ದೆ. ಅದು ನನಗೂ ಕಾಟ ಕೊಡುತ್ತಿದೆ. ಆ ನೊಣ ವಾಟಾಳ್ ನಾಗರಾಜ್‌ರವರದ್ದು.

ಅಧ್ಯಕ್ಷರು:- ಹತ್ತಿಯವರು ನನ್ನ ಹತ್ತಿರ ಬಂದು ಏನು ಹೇಳಿದರು ಎಂದರೆ, ಅಲ್ಲಿ ಎಂಎಲ್‌ಎಗಳಿಗೆ ಕಛೇರಿಯನ್ನು ನೀಡಬೇಕೆಂದು ಮಾಡಿದ್ದೇವಲ್ಲ He has not been provided with a place in Bidar. He expressed that the Deputy Commissioner of Bidar is not cooperating with him. You or the Revenue Minister may advise the Deputy Commissioner to cooperate with him in the matter of providing an office to the MLA.

SRI M.C NANAIAH:- Mr Speaker Sir, according to the circular we will make necessary arrangements.

ಶ್ರೀ ಎನ್. ಯೋಗೀಶ್ ಭಟ್:- ನಾನು ಒಂದೇ ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

MR.SPEAKER:- Please sit down. You have got up too many times. ಆಯಿತು ಮುಗಿಸಿದ್ದೇವೆ, ಯೋಗಿಶ್ ಭಟ್ ಎಷ್ಟು ಹೊತ್ತು ನಡೆಸಬೇಕು ಹೇಳಿ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಮೊದಲೇ ಅಧ್ಯಕ್ಷರಿಗೆ ಹೇಳಿದೆ, ಎಲ್ಲಿ ಬೆಲ್ಲವಿರುತ್ತದೆ ಅಲ್ಲೇ ಜಾಸ್ತಿ ನೊಣ ಬಂದು ಕುಳಿತುಕೊಳ್ಳುತ್ತವೆ. ಆ ಕಡೆ ನೋಡಿದರೆ ನಿಮ್ಮ ಹತ್ತಿರ ಬಂದು ಕುಳಿತಿದೆ.

ಅಧ್ಯಕ್ಷರು:- ಬೆಲ್ಲದರವರ ಕಡೆ ಹೋಗಿವೆ ನೋಡಿ.

ಶ್ರೀ. ವಾಟಾಳ್ ನಾಗರಾಜ್:- ಹಾಗಾದರೆ ನೀವು, ನಾಯಕರು ಬಹಳ ಖಾರವಾಗಿದ್ದೀರಾ?

ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು, ಏಕೆಂದರೆ ನಾಣಯ್ಯನವರು ಕೂಡ ಇಲ್ಲೇ ಇದ್ದಾರೆ.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ನನ್ನದೊಂದು ವಿಷಯವಿತ್ತು.

ಅಧ್ಯಕ್ಷರು:- ನಿಮ್ಮ ಶೂನ್ಯವೇಳೆ ಇವತ್ತಿಗೆ ಮುಕ್ತಾಯವಾಯಿತು, ನಾಳೆ ಬರುತ್ತದೆ, You are participating in all matters. You wanted to get up on all matters during Zero hour also. That's why you want another opportunity. It does not look nice. How it is possible? I am helpless. You must understand my difficulty also.

ವಿಷಯ (೮) ಮಕ್ಕಳ ಅಭಿವೃದ್ಧಿ ಇಲಾಖೆ ಕುರಿತು (ವಿರೋಧ ಪಕ್ಷದ ನಾಯಕರು)

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿಕೆಯನ್ನು ನಾಣಯ್ಯನವರು ಹೊರಗಡೆ ಕೊಟ್ಟಿದ್ದಾರೊ ಅಥವಾ ಆ ಸದನದಲ್ಲಿ ಕೊಟ್ಟಿದ್ದಾರೊ ಗೊತ್ತಿಲ್ಲ, ನಾನು ಪತ್ರಿಕೆಯಲ್ಲಿ ಓದಿದೆ. ಮತ್ತೆ ಇದರ ನಮ್ಮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಈ ಐಸಿಡಿಎಸ್ ಪ್ರೊಗ್ರಾಂ ಬಗ್ಗೆ ಸುಮಾರು 21,226 ಮೆಟ್ರಿಕ್ ಟನ್ ಅಕ್ಕಿ, ಪೌಷ್ಠಿಕ ಆಹಾರ 21, 467 ಮೆಟ್ರಿಕ್ ಟನ್, ಇನ್ನು ಮಿಶ್ರಿತ ಪೌಷ್ಠಿಕ ಆಹಾರ, ಮತ್ತು ಮೂರು ದಿವಸದ ಸಲುವಾಗಿ 31, 814 ಮೆಟ್ರಿಕ್ ಟನ್ ಈ ರೀತಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸುಮಾರು 39, 985 ಅಂಗನವಾಡಿ ಸ್ಕೂಲ್‌ಗಳಿಗೆ ಖರೀದಿ ಮಾಡುತ್ತಾರೆ. ಆದುದರಿಂದ ಕೇಂದ್ರ ಸರ್ಕಾರದ ನೆರವಿನಿಂದ ಮೂವತ್ತೆರಡು ಲಕ್ಷ ಮಕ್ಕಳಿಗೆ ಪ್ರಯೋಜನವಾಗಬೇಕೆನ್ನುವ ಉದ್ದೇಶದಿಂದ ನಡೆಯತಕ್ಕಂಥ ಒಂದು ಯೋಜನೆಯಾಗಿದೆ. ಇದರಲ್ಲಿ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎನ್ನುವುದು, ಸುಮಾರು ಈ ಮೂರು ಸಂಸ್ಥೆಗಳಾದ ಕರ್ನಾಟಕ ಆಗ್ರೊ